ಕನ್ನಡದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಧಾರವಾಡದ ಹೇಮಾ ಪಟ್ಟಣಶೆಟ್ಟಿ ಕನ್ನಡ ಉಪನ್ಯಾಸಕಿಯಾಗಿ ಕಾರ್ಯ ನಿರ್ವಹಿಸಿದವರು. ಅನುವಾದ ಹಾಗೂ ಪ್ರಕಾಶನ ಕ್ಷೇತ್ರಕ್ಕೆ ಮಹತ್ವದ ಕೊಡುಗೆ ಸಲ್ಲಿಸಿರುವ ಬರಹಗಾರ್ತಿ. 'ಅನನ್ಯ ಪ್ರಕಾಶನ'ದ ಮೂಲಕ ಅನನ್ಯ ಕೃತಿಗಳನ್ನು ಪ್ರಕಟಿಸಿರುವ ಅವರು, 'ಸಂಕಲನ' ಸಾಹಿತ್ಯ ಪತ್ರಿಕೆಯ ಸಂಪಾದಕಿಯಾಗಿಯೂ ದುಡಿದಿದ್ದಾರೆ. 'ವಿರಹೋತ್ಸವ', 'ಹೊಸಹಾಡು', 'ಕಣ್ಣುಗಳಲಿ ಕನಸು ತುಂಬಿ', 'ಬಾಳ ಗರ್ಭದಲಿ', 'ಉಸಿರ ಬದುವಿನ ಗುಂಟ' ಅವರ ಪ್ರಸಿದ್ಧ ಕವನಸಂಕಲನಗಳು. 'ಮುಸುಕಿದೀ ಮಬ್ಬಿನಲಿ' ಕಥಾಸಂಕಲನ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ಸೇರಿದಂತೆ ಹಲವು ಗೌರವಗಳಿಗೆ ಭಾಜನರು.



16ನೇ ಶತಮಾನದ ಪಂಚಶಾಖೆಗಳಾದ ಬಲರಾಮ್ ದಾಸ್, ಜಗನ್ನಾಥ ದಾಸ್, ಅಚ್ಯುತಾನಂದ ದಾಸ್, ಅನಂತ ದಾಸ್ ಮತ್ತು ಯಶೋಬಂತ ದಾಸ್ ಅವರು ಹಿಂದಿನ ಮತ್ತು ವರ್ತಮಾನದ ತಾತ್ವಿಕ ಸಿದ್ಧಾಂತ, ಪುರಾಣ, ಇತಿಹಾಸ ಮತ್ತು ಕಾವ್ಯಗಳನ್ನು ಮರುಸೃಷ್ಟಿಸಿದರು. ಐತಿಹಾಸಿಕ ಮತ್ತು ಸಮಕಾಲೀನ ಸಾಂಸ್ಕೃತಿಕ ವಿಕಾಸವನ್ನು ಸೃಜನಶೀಲ ಚಿಂತನೆಯಲ್ಲಿ ಆಧುನಿಕತೆಯೊಂದಿಗೆ ಬೆರೆಸಿದರು. ಈ ಐವರು ಸ್ನೇಹಿತರನ್ನು ಗ್ರಾಮೀಣ ಒಡಿಶಾದ ಅನಕ್ಷರಸ್ಥ ಜನಸಾಮಾನ್ಯರಿಗೆ ಭಾರತೀಯ ಸಾಂಸ್ಕೃತಿಕ ನೀತಿ ಮತ್ತು ತಾತ್ವಿಕ ಸಂಕೀರ್ಣತೆಗಳನ್ನು ತೆರೆದು ತೋರಿದ ಪುರುಷರು ಎಂದು ಗೌರವಿಸಲಾಗಿದೆ.

ಭಾರತದ ಮಹಾಕಾವ್ಯ ಪರಂಪರೆಯಲ್ಲಿ ಪೌರಾಣಿಕ ಕಾವ್ಯ ಸಂಪ್ರದಾಯ ಮತ್ತು ಪ್ರಾಚೀನ ಋಷಿಮುನಿಗಳ ಅಂತರ್ಬೋಧೆಯ ಶೋಧಗಳು ಒಡಿಯಾ ಸಾಹಿತ್ಯಕ್ಕೆ ಪ್ರಚೋದನೆಯನ್ನು ನೀಡಿದವು. ಮುಂದೆ ಇದು ಅಖಿಲ ಭಾರತೀಯ ಮಾರ್ಗದಲ್ಲಿ ಪ್ರವರ್ಧಮಾನಕ್ಕೆ ಬಂದಿತು. ಮಹಾಕಾವ್ಯದ ಸಂಕೇತಗಳನ್ನು ರೂಪಕ, ಉಪಮೆ ಮತ್ತು ಪಾತ್ರ ನಿರ್ವಹಣೆಯಲ್ಲಿ ಅನುಕರಿಸಲಾಯಿತು. ವಾಸ್ತವವಾಗಿ, ಮಧ್ಯಕಾಲೀನ ಅವಧಿಯಲ್ಲಿ ಮತ್ತು ಅದರ ನಂತರ 19ನೇ ಶತಮಾನದ ಮಧ್ಯಭಾಗದವರೆಗೂ ಕೃಷ್ಣನ ರೂಪಕವು ದೈವಿಕ ಅವತಾರವಾಗಿ ಒಡಿಯಾ ಕಾವ್ಯವನ್ನು ನಿಯಂತ್ರಿಸುವ ಆಕರವಾಗಿತ್ತು. ಆದರೆ, ಸರಳಾ ದಾಸ್ ಅವರ ಮಹಾಭಾರತದ ಪ್ರಬಲ ಪ್ರಭಾವದಿಂದಾಗಿ, ಕೃಷ್ಣ ರೂಪಕವು ಕವಿ, ಲೇಖಕರು ಮತ್ತು ಜನರ ಮನಸ್ಸಿನಲ್ಲಿ ಬೇರೂರುವಂತಾಯಿತು.

◆ **ಗೋಪಿನಾಥ್ ಮೊಹಂತಿ ಅವರು ಮುಂದಿನ ಪೀಳಿಗೆಯ ಒಡಿಯಾ ಬರಹಗಾರರಿಗೆ ಹೊಸ ಮಾರ್ಗವನ್ನು ತೆರೆದರು. ನೀವೂ ಮತ್ತೊಂದು ಹೊಸ ಮಾರ್ಗ ತೆರೆದಿದ್ದೀರಿ ಎನ್ನಲಾಗುತ್ತದೆ. ಬರಹಗಾರನನ್ನು 'ಪ್ರಾದೇಶಿಕ'ತೆಯ ಹೊರತಾಗಿಯೂ 'ರಾಷ್ಟ್ರೀಯ' ಬರಹಗಾರನನ್ನಾಗಿ ಮಾಡುವುದು ಯಾವುದು?**

ನಿಮ್ಮ ಈ ಪ್ರಶ್ನೆಗೆ ನನ್ನ ಉತ್ತರವೆಂದರೆ– ನಾನು ಯಾವಾಗಲೂ ಹೇಳುವುದೇನೆಂದರೆ– ಭಾಷೆ ಪ್ರಾದೇಶಿಕವಾದರೂ ಸಾಹಿತ್ಯ ಸಾರ್ವತ್ರಿಕ. ಪ್ರಪಂಚದಾದ್ಯಂತ ಮಾನವರ ಭಾವನೆಗಳು ಒಂದೇ ಆಗಿರುತ್ತವೆ; ಸಾರ್ವತ್ರಿಕವಾಗಿ ರಕ್ತ ಕೆಂಪು ಮತ್ತು ಕಣ್ಣೀರು ಉಪ್ಪಾಗಿರುತ್ತದೆ. ಒಂದು ಭಾಷೆಯ ಸಾಹಿತ್ಯವನ್ನು ವಿವಿಧ ಭಾಷೆಗಳ ಓದುಗರು ಸ್ವೀಕರಿಸಿದಾಗ (ಸಹಜವಾಗಿ, ಅನುವಾದದ ಮೂಲಕ) ಬರಹಗಾರ ರಾಷ್ಟ್ರೀಯ ಬರಹಗಾರನಾಗುತ್ತಾನೆ. ಗೋಪಿನಾಥ್ ಮೊಹಂತಿ ಅವರನ್ನು ಅವರ ನಂತರದ ಯಾವುದೇ ಒಡಿಯಾ ಬರಹಗಾರರೊಂದಿಗೆ ಹೋಲಿಸಲಾಗದು. ನಿಮ್ಮ ಪ್ರಶ್ನೆಯ